

# ಕುಂಬಾರ ಕಪ್ಪೆಗೆ ಗ್ರೀನ್ ಆಸ್ಕರ್ ಸಿಂಗಾರ

## ಪ್ರಶಾಂತ್ ಎಸ್. ನಾಯಕ ನಿರ್ದೇಶನದ 'ಕಪ್ಪೆ ರಾಗ' ಡಾಕ್ಯು ಫಿಲ್ಮ್‌ಗೆ ಜಾಗತಿಕ ಪ್ರಶಸ್ತಿ

**ಪಶ್ಚಿಮಘಟ್ಟದಲ್ಲಿ ಮಾತ್ರ ಜೀವಿಸುವ ಅಪರೂಪದ ಜೀವಸಂಕುಲದಲ್ಲಿ ಕುಂಬಾರ ಕಪ್ಪೆಯೂ ಒಂದು. ಅದರ ಜೀವನ ಸಂಸ್ಕೃತಿ ಆಧರಿಸಿ ರೂಪಿಸಿದ ಕಿರುಚಿತ್ರಕ್ಕೆ 'ಗ್ರೀನ್ ಆಸ್ಕರ್' ಪ್ರಶಸ್ತಿ ಲಭಿಸಿದೆ. ಈ ಮೂಲಕ ಕರ್ನಾಟಕದ ಜೀವಿವೈವಿಧ್ಯ ಹಾಗೂ ಕನ್ನಡದ ದೃಶ್ಯಮಾಧ್ಯಮ ವಿಶ್ವದ ಗಮನಸೆಳೆದಿದೆ.**

■ ರಾಘವೇಂದ್ರ ಕೆ. ತೊಗರ್ಸಿ

ನಿಶಾಚರಿ ಕಪ್ಪೆಯೊಂದು 2014ರಲ್ಲಿ ಮನುಷ್ಯಲೋಕಕ್ಕೆ ಪರಿಚಯಗೊಂಡಿತು. ಅವರೆಗೂ ನಿಗೂಢವೇ ಆಗಿದ್ದ ಆ ಕಪ್ಪೆಯ ಹೆಸರು 'ಕುಂಬಾರ ಕಪ್ಪೆ'. ಅದರ ಜೀವನಕ್ರಮದ ಪ್ರಮುಖ ಘಟ್ಟವೇ ಕುಂಬಾರಿಕೆಯ ಕೌಶಲ. ಆ ಎಳೆಯನ್ನೇ ಹಿಡಿದು ರಚನೆಯಾದ ಸಾಕ್ಷ್ಯಚಿತ್ರ 'ಕಪ್ಪೆರಾಗ'. ಆ ಚಿತ್ರಕ್ಕೀಗ ವಿಶ್ವಮಾನ್ಯ 'ಜ್ಯಾಕ್ಸನ್ ವೈಲ್ಡ್ ಮೀಡಿಯಾ' ಪುರಸ್ಕಾರ ಅರಸಿ ಬಂದಿದೆ. ಈ ಪ್ರಶಸ್ತಿ 'ಗ್ರೀನ್ ಆಸ್ಕರ್' ಎಂದೇ ಪ್ರಸಿದ್ಧಿ.

'ಕಪ್ಪೆರಾಗ' ಡಾಕ್ಯು ಫಿಲ್ಮ್‌ನ ನಿರ್ದೇಶಕ ಪ್ರಶಾಂತ್ ಎಸ್. ನಾಯಕ್ ಅವರಿಗೆ ವೈಲ್ಡ್‌ಲೈಫ್ ಸಿನಿಮಾ ಬಗ್ಗೆ ಇನ್ನಿಲ್ಲದ ಆಸಕ್ತಿ. 2016ರಲ್ಲಿ ಪಶ್ಚಿಮಘಟ್ಟ ಪ್ರದೇಶದಲ್ಲಿ ಹೊಸ ವಸ್ತು, ಸನ್ನಿವೇಶದ ಹುಡುಕಾಟದಲ್ಲಿದ್ದ ಪ್ರಶಾಂತ್‌ರಿಗೆ ಸಂಶೋಧಕ ಗಿರೀಶ್ ಜನ್ನಿ ಆಕಸ್ಮಿಕವಾಗಿ ಭೇಟಿಯಾದರು. ಮಾತಿನ ನಡುವೆ, 'ಇತ್ತೀಚೆಗೆ ವಿಶಿಷ್ಟ ಬಗೆಯ ಕಪ್ಪೆ ಪತ್ತೆಯಾಗಿದೆ. ಹೊಸ ಪ್ರಭೇದವನ್ನು ಗುರುರಾಜ್ ಕೆ.ವಿ. ಆವಿಷ್ಕರಿಸಿದ್ದಾರೆ' ಎಂದರು. ಅಲ್ಲಿಂದ, ಪ್ರಶಾಂತ್ ಕಪ್ಪೆಯ ಬೆನ್ನುಬಿದ್ದರು.

ಶರಾವತಿ ಕಣಿವೆಯಲ್ಲೇ ಸಂಶೋಧನೆ ಮಾಡುತ್ತಿದ್ದ ಜನ್ನಿ ಹೊಸ ಪ್ರಭೇದದ ಕಪ್ಪೆಯ ಬಗ್ಗೆ ಒಂದಷ್ಟು ವಿಷಯಗಳನ್ನು ತಿಳಿಸಿದರು. 'ರಾತ್ರಿ ಮಾತ್ರ ಚಟುವಟಿಕೆಯಿಂದ ಇರುತ್ತದೆ. ಹಾಗಾಗಿ ರಾತ್ರಿ 7 ಗಂಟೆಗೆ ಹೋಗಬೇಕು. ಮೊಳಕಾಲಷ್ಟು



ನಿರ್ದೇಶಕ ಪ್ರಶಾಂತ್ ನಾಯಕ

ಉದ್ದದ ಪ್ಲಾಸ್ಟಿಕ್ ಶೂ ಹಾಕಿಕೊಂಡು ಹೋಗದಿದ್ದರೆ ಇಂಬಳಕ್ಕೆ (ಜಿಗಣೆ) ಆಹಾರ ಆಗಬೇಕಾಗುತ್ತದೆ' ಅಂದರು.

ಆ ಮಾತನ್ನು ನೆಚ್ಚಿಕೊಂಡು ಕತ್ತಲ ರಾತ್ರಿಯಲ್ಲಿ ಪ್ರಶಾಂತ್ ನಡೆಸಿದ ಹುಡುಕಾಟ ಫಲ ಕೊಡಲಿಲ್ಲ. ನಿತ್ಯ ಸಂಜೆ 7 ಗಂಟೆಗೆ ಹೋಗಿ ಬೆಳಗಿನ ಜಾವ 4 ಗಂಟೆಯವರೆಗೂ ಹುಡುಕುವುದು, ನಸುಕಿನಲ್ಲಿ ನಿರಾಶೆಯಿಂದ ಮರಳುವುದು– ಹುಡುಕಾಟದ ಬಗ್ಗೆ ಉತ್ಸಾಹ ಕಳೆದುಕೊಳ್ಳುವ ಹಂತದಲ್ಲಿ, ನಾಲ್ಕನೇ ದಿನ ಕಪ್ಪೆಯ ಕೂಗು ಕೇಳಿಸಿ ಆಶಾಭಾವ ಚಿಗುರಿತು. ಆ ಜಾತಿಯಲ್ಲಿ ಗಂಡು ಮಾತ್ರ ಕೂಗುತ್ತದೆ. ಗಂಡಿನ ಧ್ವನಿಯನ್ನು ಕೇಳಿಯೇ ಅದರ ವ್ಯಕ್ತಿತ್ವವನ್ನು ಅಳೆದು ಹೆಣ್ಣು ಕಪ್ಪೆ ಪ್ರೀತಿ ವ್ಯಕ್ತಪಡಿಸುತ್ತದೆ.

ಪ್ರತಿ ಕಪ್ಪೆಯದೂ ಅನನ್ಯ ಧ್ವನಿ. ಗಂಡು ಕಪ್ಪೆ ಕೂಗುವುದರಿಂದ ಅದನ್ನು ಹುಡುಕುವುದು ಸುಲಭ. ಹೆಣ್ಣನ್ನು ಪತ್ತೆ ಹಚ್ಚುವುದು ತುಂಬ ಕಷ್ಟ. ಮೂರು ಇಂಚು ಉದ್ದದ ಪುಟ್ಟ ಕಪ್ಪೆಯದು. ಹೆಣ್ಣು, ಗಂಡಿನ ಪ್ರೀತಿಯ ಕರೆಗೆ ಮನಸೋತು ಬರುತ್ತದೆ. ಹೀಗೆ ವಿವರಗಳನ್ನು ಮೆಲುಕು ಹಾಕುವ ವೇಳೆಗೆ, ಹತ್ತನೇ ದಿನ ಅದ್ಭುತವೊಂದು ಘಟಿಸಿತು. ಹೆಣ್ಣು ಕಪ್ಪೆಯ ದರ್ಶನವಾದುದು, ಪ್ರಶಾಂತ್ ಅವರಲ್ಲಿ ಹರ್ಷದ ಹೊನಲನ್ನೇ ಹರಿಸಿತು. ಅಂದು, ಗಂಡು ಇದ್ದ ಸ್ಥಳದಿಂದ 5 ಅಡಿ ದೂರದಲ್ಲಿ ಹೆಣ್ಣು ಹಂಬಲದಿಂದ ಕಾತರಿಸುತ್ತಿದ್ದಳು. ರಾತ್ರಿ 8 ಗಂಟೆ ಸುಮಾರಿಗೆ ಕಂಡ ಅವಳು, ಗಂಡನ್ನು ಭೇಟಿಯಾಗುವ ಹೊತ್ತಿಗೆ ಬೆಳಗಿನ 4 ಗಂಟೆ. ಅತ್ಯಂತ ಸೂಕ್ಷ್ಮ ಗುಣದ ಆ ಕಪ್ಪೆಯ ಕ್ರಿಯೆ ತುಂಬ ನಿಧಾನ. ಕಪ್ಪೆಗಳ ಪ್ರೇಮ–ಮಿಲನವೂ ಬಲು ನಾಜೂಕು. ಎರಡೂ ಕಪ್ಪೆಗಳು ಭೇಟಿಯಾದ ತಕ್ಷಣ ನಿಂತು ಅಪ್ಪಿಕೊಳ್ಳುತ್ತವೆ. ನಂತರ ಹೆಣ್ಣು ಆ ಸ್ಥಳವನ್ನು ಪರಿಶೀಲಿಸುತ್ತದೆ. ಸ್ಥಳ ಅಸುರಕ್ಷಿತ ಅನ್ನಿಸಿದರೆ ತಕ್ಷಣ ಅಲ್ಲಿಂದ ಹೋಗಿಯೇ ಬಿಡುತ್ತದೆ. ಆ ದಿನವೂ ಹಾಗೆಯೇ ಆಯಿತು. ಹೆಣ್ಣು ಕಣ್ಣಿಗೆ ಕಾಣದಂತೆ ಎಲ್ಲೋ ಹೋಯಿತು. ಆಮೇಲೆ ನಾಲ್ಕು ದಿನ ಹುಡುಕಿದರೂ ಅಂತಹ ಸುವರ್ಣ ಸಂದರ್ಭ